ಬಾಗಲಕೋಟೆಯಲ್ಲಿ ಆಹಾರ ಸಂಸ್ಕರಣ ಉದ್ಯಾನವನವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆ) ಹೌದು

ಇ) ಗ್ರಾಮೀಣ ಪ್ರದೇಶ ಕುಶಲಕರ್ಮಿಗಳಿಗೆ ಜಮಖಂಡಿ, ಬಿಲ್ಕಾನಿ, ಕೂಡಲಸಂಗಮ ಮತ್ತು ಇಳಕಲ್‌ನಲ್ಲಿ ಕಾಯಕನಗರ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಾಗೂ ಕೂಡಲಸಂಗಮದಲ್ಲಿ ಸರ್ಕಾರಿ ವಸತಿ-ಮ-ಕಾರ್ಯಾಗಾರ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಸರ್ಕಾರವು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದಿಲ್ಲ. ಆದರೆ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಲಾಗುತ್ತಿದೆ.

ಈ) ಹೌದು

ಉ) ಹೌದು. ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಉತ್ತೇಜಿಸುತ್ತದೆ.

ರಾಜ್ಯದಲ್ಲಿ ಪಟ್ಟಣ ಪಂಚಾಯಿತಿಗಳ ಆರ್ಥಿಕ ಸ್ಥಿತಿ

833 (979) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಟ್ಟಣ ಪಂಚಾಯತಿಗಳು ಆರ್ಥಿಕವಾಗಿ ದುಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರಿಯಾದ ಹಣಕಾಸಿನ ವ್ಯವಸ್ಥೆ ಇಲ್ಲದೇ ಇರುವುದರಿಂದ ಪಟ್ಟಣಗಳಲ್ಲಿ ಸಾರ್ವಜನಿಕರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸುವುದು ಪಟ್ಟಣ ಪಂಚಾಯತಿಗಳಿಂದ ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ 2001-2002ರ ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಪಟ್ಟಣಪಂಚಾಯತಿಗಳಿಗೆ ಬಿಡುಗಡೆ ಮಾಡಲು ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೇ? ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಪಟ್ಟಣಗಳಲ್ಲಿ ಯಾವ ಯೋಜನೆಗಳ ಮುಖಾಂತರ ಸಾರ್ವಜನಿಕರಿಗೆ ಎಲ್ಲಾ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಇಲ್ಲ

ಆ) ರಾಜ್ಯದಲ್ಲಿರುವ ಪಟ್ಟಣ ಪಂಚಾಯತಿಗಳು ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳು ಅವುಗಳ ಸೀಮಿತ ಆದಾಯದಲ್ಲಿ ಸಾರ್ವಜನಿಕರಿಗೆ ಒದಗಿಸಿಕೊಡಬೇಕಾದ ಕನಿಷ್ಠ ಮೂಲಭೂತ ನಾಗರೀಕ ಸೌಕರ್ಯಗಳಾದ ಸಂಚಾರಯೋಗ್ಯ ರಸ್ತೆ, ಚರಂಡಿ, ಕುಡಿಯುವ ನೀರಿನ ಸರಬರಾಜು ಹಾಗೂ ರಸ್ತೆ ದೀಪಗಳ ವ್ಯವಸ್ಥೆಯನ್ನು ಒದಗಿಸಲು ಅವುಗಳಿಗೆ ಸಾಧ್ಯವಾಗದೇ ಇರುವುದರಿಂದ ಸರ್ಕಾರವು ಪಟ್ಟಣ ಪಂಚಾಯತಿಗಳೂ ಸಹ ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲು ಉದ್ದೇಶ ಹುಡ್ಕೋ

ಸಂಸ್ಥೆಯಿಂದ ರೂ. 100 ಕೋಟಿ ಸಾಲವನ್ನು ಪಡೆಯಲು ಆ ಸಂಸ್ಥೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದು, ಸದರಿ ಸಾಲದ ಹಣದಲ್ಲಿ ರಾಜ್ಯದಲ್ಲಿರುವ ಪ್ರತಿಯೊಂದು ಪಟ್ಟಣ ಪಂಚಾಯತಿಗಳಿಗೆ ರೂ. 25 ಲಕ್ಷಗಳ ಪೆಚ್ಚದಲ್ಲಿ ಪ್ರಾಮುಖ್ಯವಾಗಿ ಆಯ್ಕೆ ಮಾಡಿದ ರಸ್ತೆಗಳ ಸುಧಾರಣೆ ರಸ್ತೆ ಅಗಲೀಕರಣ, ಡಾಂಬರೀಕರಣ, ರಸ್ತೆ ದುರಸ್ತಿ, ರಸ್ತೆಯ ಇಕ್ಕೆಲಗಳಲ್ಲಿ ಚರಂಡಿ ನಿರ್ಮಾಣ ಸಣ್ಣಸೇತುವೆಗಳ ನಿರ್ಮಾಣ, ಚಿಕ್ಕ ಕಲ್ವರ್ಟ್‌ಗಳ ನಿರ್ಮಾಣ ಹಾಗೂ ಬೀದಿ ದೀಪಗಳ ವ್ಯವಸ್ಥೆಯನ್ನು ಮಾಡಲು ಉದ್ದೇಶಿಸಲಾಗಿದೆ. ಆದ್ದರಿಂದ 2001-2002ನೇ ಸಾಲಿನ ಆಯವ್ಯಯದಲ್ಲಿ ಪಟ್ಟಣ ಪಂಚಾಯತಿಗಳಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಕ್ರಮಕೈಗಯಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ನಗರಸಭೆ ಮತ್ತು ಪುರಸಭೆಗಳ ಚುನಾವಣೆ

835 (1047) ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳಿಗೆ ದಿನಾಂಕಗಳನ್ನು ಗೊತ್ತುಪಡಿಸಲಾಗಿದೆಯೇ?

ಆ) ಈ ಸಂಸ್ಥೆಗಳ ಸ್ಥಾನ ಮೀಸಲಾತಿ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ನಂತರ ಸರ್ಕಾರ ಹಾಕಿಕೊಂಡಿರುವ ಮಾರ್ಗಸೂಚಿಗಳೇನು? ವಿವರಗಳನ್ನು ಕೊಡುವುದು.

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಇಲ್ಲ

ಆ) ಮಾರ್ಗಸೂಚಿಯ ವಿವರ ಈ ಕೆಳಕಂಡಂತಿದೆ.

1. ಪ್ರಸಕ್ತ ಚುನಾವಣೆಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಒಟ್ಟು ಸ್ಥಾನಗಳ ಸಂಖ್ಯೆ ಹಿಂದಿನ ಚುನಾವಣೆಯಷ್ಟೇ ಇರತಕ್ಕದ್ದು.

2. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಮೀಸಲಾತಿ ಸ್ಥಾನಗಳಿಗೆ ಸಂಬಂಧಿಸಿದಂತೆ ವಿವಿಧ ವಾರ್ಡುಗಳಲ್ಲಿನ 'ಅ' ವರ್ಗಕ್ಕೆ ಸೇರಿದ ಅಂದಾಜಿಸಿದ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟು ಕೊಳ್ಳತಕ್ಕದ್ದು.

3. ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ, ಜನಗಣತಿಯಲ್ಲಿ ಈ ವರ್ಗದ ಜನಸಂಖ್ಯೆಯನ್ನು ಲೆಕ್ಕಹಾಕದೇ ಇರುವ ಕಾರಣ, ಹಿಂದುಳಿದ ವರ್ಗಗಳು, ಮಹಿಳಾ ಮೀಸಲಾತಿ ಹಾಗೂ ಸಾಮಾನ್ಯ ವ್ಯಕ್ತಿಗಳ ಸ್ಥಾನಗಳಲ್ಲಿ ಬದಲಾವಣೆಗಳನ್ನು ಈ ಕೆಳಕಂಡ ಮಾದರಿಯನ್ನು ಅನುಸರಿಸಿ ಮಾಡತಕ್ಕದ್ದು.

ಅ) ಹಿಂದುಳಿದ ವರ್ಗದ ಮಹಿಳಾ ಮೀಸಲಾತಿ ಸ್ಥಾನಗಳನ್ನು ಸಾಮಾನ್ಯ ವರ್ಗದ ವ್ಯಕ್ತಿಗಳ ಸ್ಥಾನಗಳಿಗಿರುವ ವಾರ್ಡುಗಳಿಂದ ಪರಸ್ಪರ ವರ್ಗಾವಣೆ ಮೇಲೆ ನಿಗಧಿಪಡಿಸತಕ್ಕದ್ದು.